ಓ.ಎಸ್.183/2021 ಡಿ.ಡಬ್ಲು-3
*ಮಲ್ಲಮ್ಮ ಗಂಡ ಹನುಮಪ್ಪ*

ದಿ.25-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ವಿ.ಜೆ.ಕೆ ವಕೀಲರಿಂದ:-**

ನನ್ನ ಮದುವೆಯಾಗಿ 35 ವರ್ಷವಾಗಿರುತ್ತದೆ. ಯಾವ ಇಸವಿಯಲ್ಲಿ ಆಗಿದೆ ಎಂದು ನನಗೆ ನೆನಪಲ್ಲ. ನಾನು ನನ್ನ ಗಂಡನ ಮೇಲೆ ಹಾಕಿದ್ದು ಅದಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿದ್ದು ಆಸ್ತಿಯನ್ನು ಮಾರಾಟ ಮಾಡಬಾರದು ಎಂದು ಅರ್ಜಿ ಹಾಕಿರುತ್ತೇನೆ. ಮದನ್ ರವರು ಖರೀದಿ ಮಾಡಬಾರದು ಎಂದರೂ ಸಹ ಖರೀದಿ ಮಾಡಿರುತ್ತಾರೆ. ಆಸ್ತಿ ಮಾರಾಟ ಮಾಡುವ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿ. ನಾನು ಮದುವೆಯಾಗಿ 10-15 ವರ್ಷ ಮಾತ್ರ ಕರಡಕಲ್ಲಿನಲ್ಲಿ ಇದ್ದು. ನಮ್ಮ ಅತ್ತೆ ಮತ್ತು ನಾದಿನಿ ನನಗೆ ಸೇರಲಾರದ ಕಾರಣ ನನ್ನ ತವರು ಮನೆಯಲ್ಲಿ ಜೀವನ ಮಾಡುತ್ತಿದ್ದೇನೆ. ಮದುವೆಯಾಗಿ 6 ತಿಂಗಳಿಗೆ ನನಗೆ ಮತ್ತು ನನ್ನ ಅತ್ತೆಗೆ ನಡೆಯಲಿಲ್ಲ ಎಂದರೆ ಸರಿ. ನಮ್ಮ ಅತ್ತೆ ಮತ್ತು ನನಗೆ ಸರಿಯಿರದ ಕಾರಣ ನಮ್ಮ ಅತ್ತೆ ಅವರ ಮಗಳ ಮನೆಯಲ್ಲಿ ಇದ್ದಳು ಎಂದರೆ ಸರಿ. ನಾನು ಮತ್ತು ನನ್ನ ಗಂಡ ಅದೇ ಮನೆಯಲ್ಲಿ ಇದ್ದೇವು ಎಂದರೆ ಸರಿ. ನಮ್ಮ ನಾದಿನಿ ಸಿದ್ದವ್ವಳನ್ನು ಅದೇ ಊರಿನಲ್ಲಿ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೀಮವ್ವ ತನ್ನ ತಮ್ಮನಿಗೆ ಮಗಳನ್ನು ಕೊಟ್ಟಿದ್ದರು ಎಂದರೆ ಸರಿ.

2. ನಾನು ನನ್ನ ಗಂಡ ವಿರುದ್ದ ಪಾಲು ವಿಭಾಗಕ್ಕಾಗಿ ಕೇಸು ಹಾಕುವಾಗ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ ಎಂದರೆ ಸರಿ. ಮದನ್ ತಂದೆ ಗುಲ ಮೊಹಮ್ಮದ್ ರವರು ನನ್ನ ಗಂಡನ ಕಡೆಯಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ನನ್ನ ಅತ್ತೆ ಮತ್ತು ನಾದಿನಿ ರವರು ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ನಾನು ಪಾಲು ವಿಭಾಗ ದಾವಾ ಹಾಕುವ ಸಮಯದಲ್ಲಿ ಸರ್ವೆ ನಂ.57 ನನ್ನ ಗಂಡನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಈ ಜಮೀನು ನನ್ನ ಗಂಡನಿಗೆ ಅತ್ತೆ-ಮಾವನಿಂದ ಬಂದಿರುತ್ತದೆ. ನನ್ನ ಗಂಡನಿಗೆ ಕುಡಿಯುವುದು ಮತ್ತು ಇಸ್ಪೀಟ್ ಆಡುವುದು ಚಟ ಇತ್ತು ಎಂದರೆ ಸರಿ. ಮೊದಲು ಚಟ ಇತ್ತು ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ಕುಡಿಯುವ ಮತ್ತು ಇಸ್ಪೀಟ್ ಆಡುವ ಚಟ ಇರುವುದರಿಂದ ಆತ ಸಾಲ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತವರು ಮನೆಯಲ್ಲಿ ಇದ್ದಾಗ ನನ್ನ ಗಂಡ ಅಲ್ಲಿಗೆ ಹೋಗುವುದು ಮತ್ತು ಬರುವುದು ಮಾಡುತ್ತಿದ್ದ ಎಂದರೆ ಸರಿ. ನನ್ನ ಗಂಡ ಸಾಲ ಮಾಡಿದ ಕಾರಣದಿಂದ ಹೊಲ

ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಿದ್ದಮ್ಮ ಮತ್ತು ಭೀಮವ್ವ ಆಸ್ತಿ ಮಾರಾಟ ಮಾಡಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ.

೩. ನಿ.ಪಿ-1 ಖರೀದಿ ಪತ್ರ ನನ್ನ ಗಂಡನ ಹೆಸರಿನಲ್ಲಿ ಆತನೇ ಮಾರಾಟ ಮಾಡಿ ಸಹಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡನೇ ಮಾರಾಟ ಮಾಡಿದ ಹಣವನ್ನು ನನ್ನ ಕೈಗೆ ಕೊಟ್ಟಿದ್ದು ಮತ್ತು ಈ ವಿಷಯ ಎಲ್ಲಾ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.